ಹೊಟ್ಟೆ ಹಸಿಯುತ್ತಿತ್ತು. ಆದರೆ ವಸುಂಧರೆ ಏನನ್ನೂ ತಿನ್ನದವಳು. ಇದೊಂದು ಪ್ರೊಫೆಸರರ ಸಂಶೋಧನೆಯ ಕೊರತೆಯ ಭಾಗ ಎನ್ನಿಸಿತು. ನಾನು ಪ್ರತಿದಿನ ಬೆಳಗಿನ ತಿಂಡಿ ಮತ್ತು ಮಧ್ಯಾಹ್ನದ ಊಟವನ್ನು ಕಾರ್ಖಾನೆಯಲ್ಲಿಯೇ ಮುಗಿಸುತ್ತಿದ್ದೆ. ರಾತ್ರಿ ಊಟವನ್ನು ತಯಾರಿಸಿಕೊಳ್ಳುತ್ತಿದ್ದೆ. ರಜಾ ದಿನಗಳಲ್ಲಿ ಬೆಳಗಿನ ತಿಂಡಿಯನ್ನೂ ಮಾಡಿಕೊಳ್ಳುತ್ತಿದ್ದೆ. ಅದಕ್ಕಾಗಿ ಅಡುಗೆ ಮನೆಯನ್ನು ಸಜ್ಜುಗೊಳಿಸಿಕೊಂಡಿದ್ದೆ.



ವಸುಂಧರೆಯನ್ನು ಪರೀಕ್ಷಿಸುವ ಸಲುವಾಗಿ "ವಸೂ ಹೊಟ್ಟೆ ಹಸಿಯುತ್ತಿದೆ. ನಾನು ತಿಂಡಿ ತಿಂದಿಲ್ಲ... ಏನನ್ನಾದರೂ ತಯಾರಿಸುವೆಯಾ..." ಎಂದೆ. "ಓಕೆ ಡಾರ್ಲಿಂಗ್ ಏನು ಬೇಕು" ಎಂದವಳೇ ಅಡುಗೆ ಮನೆಯ ಕಡೆ ನಡೆದೇಬಿಟ್ಟಳು. "ಉಪ್ಪಿಟ್ಟು ಸಾಕು" ಎಂದು ಹೇಳಿ ಅವಳ ಹಿಂದೆ ನಡೆದೆ. ಒಂದು ಕ್ಷಣ ಅಡುಗೆ ಮನೆಯಲ್ಲಿ ನಿಂತು ದೃಷ್ಟಿ ಹರಿಸಿದವಳು "ಉಪ್ಪಿಟ್ಟು ಮಾಡಲು ಸಾಕಷ್ಟು ರವೆಯಿಲ್ಲ ಡಾರ್ಲಿಂಗ್..." ಎಂದಳು. ಅದು ನಿಜವಾಗಿತ್ತು.

"ಇಟ್ಸ್ ಓಕೆ... ಇರಲಿ ಹೊರಗೆ ಹೋಗ್ತೀನಿ..." ಎಂದೆ. ಅದಕ್ಕೆ ಆಕೆ ಪ್ರತಿಸ್ಪಂದನೆ ನೀಡಲಿಲ್ಲ. ಅಂದರೆ ಆಕೆಗೆ ಭಾವನೆಗಳಿಲ್ಲ. ಷಿ ಹ್ಯಾಸ್ ನೋ ಎಮೋಷನ್ಸ್... ಹಸಿದಿದ್ದೀಯಾ ಹೋಗಿ ಏನನ್ನಾದರೂ ತಿಂದು ಬಾ ಎಂದು ಅವಸರಿಸಲಿಲ್ಲ! ನನ್ನ ಮನಸ್ಸು ಮತ್ತೆ ಡೋಲಾಯಮಾನವಾಯಿತು. ಅದೊಂದು ಯಂತ್ರವಷ್ಟೆ! ಪ್ರೊಫೆಸರರ ಸಂಶೋಧನೆಯಲ್ಲಿ ಕೆಲವಾರು ಮಿತಿಗಳಿವೆ. ನಾನು ಹೆಚ್ಚಿನದನ್ನು ನಿರೀಕ್ಷಿಸುತ್ತಿದ್ದೇನೆ ಎನಿಸಿತು. ನಾನೇನೂ ಬೇಸರಗೊಳ್ಳಲಿಲ್ಲ.

ಏನು ಮಾಡುವುದೆಂದು ತೋಚಲಿಲ್ಲ. ತುಸು ಹೊತ್ತು ಟೀವಿ ನೋಡೋಣವೆನ್ನಿಸಿ ವಸುಂಧರೆಯನ್ನು ಹಾಲಿನಲ್ಲಿದ್ದ ಸೋಫಾದಲ್ಲಿ ಕುಳ್ಳಿರಿಸಿ ನಾನೂ ಕುಳಿತುಕೊಂಡು ಟೀವಿ ಆನ್ ಮಾಡಿ ಚಂದನ ವಾಹಿನಿ ಹಾಕಿದೆ. ಯುವತಿಯೊಬ್ಬಳು ವಾರ್ತೆ ಓದುತ್ತಿದ್ದಳು. ವಾರ್ತೆ ಮುಗಿದ ನಂತರ "ವಸೂ... ಈವತ್ತಿನ ಸುದ್ದಿ ತಿಳಿಯಿತಾ..." ಎಂದೆ. "ಯಸ್ ಡಾರ್ಲಿಂಗ್... ಹೇಳಬೇಕಾ..." ಎಂದು ನನ್ನತ್ತ ನೋಡಿದಳು. ಪರೀಕ್ಷಿಸುವ ಸಲುವಾಗಿ "ಹೇಳು ನೋಡೋಣ..." ಎಂದೆ. ಯುವತಿ ಹೇಳಿದ ಒಂದಕ್ಷರವನ್ನೂ ಬಿಡದೇ ಸುದ್ದಿಗಳನ್ನು ಮತ್ತೆ ಬಿತ್ತರಿಸಿದಳು! ಯಾಕೋ ಏನೋ ವಸುಂಧರೆಯ ಬಗ್ಗೆ ನನಗೆ ಎಂತಹುದೋ ಅನುಕಂಪ ಮೂಡಿತು.

ವಾರ್ತೆಯನ್ನು ಪುನಃ ಬಿತ್ತರಿಸುವಾಗ ಆಕೆಯ ಬೋಳು ಹಣೆ, ಯಾವುದೇ ಆಭರಣಗಳಿಲ್ಲದ ಬೋಳು ಕುತ್ತಿಗೆ, ಕಿವಿ, ಕೈಗಳು ನನಗೆ ನಿಚ್ಚಳವಾಗಿ ಕಾಣಿಸಿದವು. ತಡಮಾಡಲಿಲ್ಲ. "ವಸೂ